ಸಿ.ಸಿ. ನಂಬರ 454/2022

ಪಿಡಬ್ಲ್ಯೂ-1

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 11-03-2024.

**ಮುಂದುವರೆದ ಪಾಟೀ ಸವಾಲು ಃ ಆರೋಪಿ ಪರ ಶ್ರೀ ಎಂ.ಎ.ಎನ್. ವಕೀಲರಿಂದ.**

ನಾವು ಆರೋಪಿತರ ವಿರುದ್ಧ ಎರಡು ಪ್ರಕರಣಗಳನ್ನು ದಾಖಲಿಸಿರುತ್ತೇವೆ. ಇನ್ನೊಂದು ಪ್ರಕರಣವನ್ನು 5 ಲಕ್ಷ ರೂಪಾಯಿಯ ಚೆಕ್ಕಿಗೆ ಸಂಬಂಧಿಸಿ ದಾಖಲಿಸಿರುತ್ತೇವೆ. ಸದ್ರಿಯದರ ಚೆಕ್ ನಂಬರ ನನಗೆ ನೆನಪಿರುವುದಿಲ್ಲ.ಆ ಹಣವನ್ನು ಯಾವ ದಿನಾಂಕದಂದು ಕೊಟ್ಟಿರುತ್ತೇನೆ ಎಂದು ನನಗೆ ನೆನಪಿರುವುದಿಲ್ಲ. ಆ ಹಣವನ್ನು ಕೊಡುವಾಗ ನಾನು, ನಮ್ಮ ತಾಯಿಯವರು ಇದ್ದೆವು. ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದ ಹಣವನ್ನು ಆರೋಪಿತರಿಗೆ ಕೊಡುವಾಗ ನಾನು, ನಮ್ಮ ತಾಯಿಯವರು ಇದ್ದೆವು. ಸದ್ರಿ ಹಣವನ್ನು ನಮ್ಮ ಮನೆಯಲ್ಲಿ ಕೊಟ್ಟಿರುತ್ತೇವೆ. ನಾವು ಹಣ ಕೊಟ್ಟಿರುತ್ತೇವೆ ಎಂದು ಹೇಳುವುದಕ್ಕಿಂತ ಮುಂಚೆ ಆರೋಪಿತನು ನಮ್ಮ ಬಳಿ ಹಣವನ್ನು ಕೇಳಲು ಬಂದಿರುವುದಿಲ್ಲ. ಆರೋಪಿತನು ಯಾವ ದಿನಾಂಕದಂದು ನಮ್ಮ ಬಳಿ ಹಣ ಕೇಳಿರುತ್ತಾನೆ ಮತ್ತು ನಾವು ಯಾವ ದಿನಾಂಕದಂದು ಹಣ ಕೊಟ್ಟಿರುತ್ತೇವೆ ಎಂದು ನನಗೆ ನೆನಪಿರುವುದಿಲ್ಲ. ಆರೋಪಿತನಿಗೆ ಹಣ ಕೊಟ್ಟಿದ್ದೇ ನಿಜವಾಗಿದ್ದಲ್ಲಿ ನಿಮಗೆ ದಿನಾಂಕ ನೆನಪಿರುತ್ತಿತ್ತು ಎಂದರೆ ಸರಿಯಲ್ಲ. ನನಗೆ ಹಣಕಾಸಿನ ವ್ಯವಹಾರದ ಬಗ್ಗೆ ಮಾಹಿತಿ ಇದೆ. ಲೇವಾದೇವಿ ವ್ಯವಹಾರದಲ್ಲಿ ದೊಡ್ಡ ಹಣ ಕೊಡ ತಕ್ಕೊಳ್ಳುವಾಗ ವ್ಯಕ್ತಿಯು ಕೊಟ್ಟ ಹಣವನ್ನು ಹಿಂದಿರುಗಿಸಿದಾಗ ಮಾತ್ರ ಮುಂದಿನ ಬಾರಿ ಹಣವನ್ನು ಕೊಡಲಾಗುತ್ತದೆ ಎಂದರೆ ನಿಜ. ನೀವು ಆರೋಪಿತನೊಂದಿಗೆ ಯಾವುದೇ ಹಣದ ವ್ಯವಹಾರ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರಕರಣದಲ್ಲಿನ ಹಣವನ್ನು ಆರೋಪಿತನಿಗೆ ಕೊಟ್ಟಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದಿರಿ ಎಂದರೆ ಸರಿಯಲ್ಲ. ಆರೋಪಿತನಿಂದ ಒಟ್ಟೂ 8 ಲಕ್ಷ ರೂಪಾಯಿ ಹಣ ನಮಗೆ ಬರುವುದು ಬಾಕಿ ಇದೆ. ನನಗೆ ತಿಂಗಳಿಗೆ 10 ಸಾವಿರ ರೂ. ಆದಾಯ ಇದೆ. ನಾನು ಆದಾಯ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ಅದರಲ್ಲಿ ನನ್ನ ವಾರ್ಷಿಕ ಆದಾಯವು 70 ಸಾವಿರ ರೂ. ಎಂದು ನಮೂದಿಸಲಾಗಿದೆ. ತಹಶೀಲ್ದಾರರವರು ಕೊಟ್ಟ ಆದಾಯ ಪ್ರಮಾಣ ಪತ್ರದ ಮೇರೆಗೆ ಮುಂದಿನ ಸರಕಾರಿ ಸೌಲಭ್ಯಗಳನ್ನು ಪಡೆದುಕೊಳ್ಳಬೇಕಾಗುತ್ತದೆ ಎಂದರೆ ನಿಜ. ಆರೋಪಿತನಿಗೆ 3 ಲಕ್ಷ ರೂ. ಹಣವನ್ನು ಸಾಲವಾಗಿ ಕೊಡುವ ಸಾಮರ್ಥ್ಯ ನಿಮ್ಮಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಎಲ್.ಎಸ್.ಎಂ.ಪಿ. ಸೊಸೈಟಿಯ ಲಾಕರ್ ನಲ್ಲಿ ಇದ್ದ ಚೆಕ್ಕುಗಳನ್ನು ದುರುಪಯೋಗಪಡಿಸಿಕೊಂಡು ಆರೋಪಿತರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತನು ನಿಮ್ಮ ಬಳಿಯಿಂದ ಯಾವುದೇ ಹಣವನ್ನು ಪಡೆದುಕೊಂಡಿರಲಿಲ್ಲ ಮತ್ತು ನೀವು ಆತನಿಗೆ ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣದ ಚೆಕ್ಕು ನಿಮ್ಮ ತಂದೆಯವರೊಂದಿಗೆ ಮಾಡಿದ ವ್ಯವಹಾರದ ಸಮಯದಲ್ಲಿ ಆರೋಪಿತನು ಕೊಟ್ಟಂತಹ ಚೆಕ್ಕಾಗಿರುತ್ತದೆ ಎಂದರೆ ಸರಿಯಲ್ಲ. ನಿಮ್ಮ ತಂದೆಯವರು ಜೀವಿತ ಸಮಯದಲ್ಲಿ ಆರೋಪಿತನು ಪಡೆದುಕೊಂಡಂತ ಸಾಲಕ್ಕಾಗಿ ಜಾಮೀನುದಾರನಾಗಿದ್ದು ಮತ್ತು ನಿಮ್ಮ ತಂದೆಯವರು ಪಡೆದ ಸಾಲಕ್ಕೆ ಆರೋಪಿತನು ಜಾಮೀನುದಾರನಾಗಿದ್ದನು ಎಂದರೆ ಸರಿಯಲ್ಲ. ನಿಮ್ಮ ತಂದೆಯವರು ಪಡೆದುಕೊಂಡ ಸಾಲಕ್ಕೆ ಆರೋಪಿತರು ಜಾಮೀನುದಾರರಾಗಿದ್ದ ಸಮಯದಲ್ಲಿ ಬ್ಯಾಂಕಿನವರು ಚೆಕ್ಕನ್ನು ಕೇಳುತ್ತಿದ್ದಾರೆಂದು ಆರೋಪಿತನ ಬಳಿಯಿಂದ ಪಡೆದುಕೊಂಡ ಚೆಕ್ಕಾಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ತಂದೆಯವರು ಮತ್ತು ಆರೋಪಿತರು ಆತ್ಮೀಯ

ಗೆಳೆಯರು ಎಂದರೆ ನಿಜ. ಹಾಗಾಗಿ ಅವರಿಬ್ಬರೂ ಒಬ್ಬರಿಗೊಬ್ಬರು ವ್ಯವಹಾರ ಮಾಡುತ್ತಿದ್ದಾಗ ಸಹಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಗೈರುಪಾಯಿದೆ ಮಾಡಿಕೊಳ್ಳುವ ಸಲುವಾಗಿ ಆರೋಪಿತನ ವಿರುದ್ಧ ಪ್ರಸ್ತುತ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

2. ಆರೋಪಿತನು ತಾನು ಪ್ಲಾಟಗಳನ್ನು ಹಾಕುತ್ತಿದ್ದೇನೆ ಎಂದು ನಮ್ಮಿಂದ ಹಣದ ಸಹಾಯವನ್ನು ಕೇಳಿದ್ದನು. ನಾವು ಆರೋಪಿತನಿಗೆ ಎಲ್ಲಿ ಮತ್ತು ಯಾವ ಪ್ಲಾಟನ್ನು ಹಾಕುತ್ತಿದ್ದಾರೆ ಎಂಬುದರ ಬಗ್ಗೆ ವಿಚಾರಿಸಿರುವುದಿಲ್ಲ. ಆರೋಪಿತನಿಗೆ 3 ಲಕ್ಷ ರೂ. ಹಣ ಕೊಡುತ್ತಿದ್ದರಿಂದ ಯಾವುದಕೋಸ್ಕರ ಎಂದು ವಿಚಾರಣೆ ಮಾಡಬೇಕಾಗಿತ್ತು ಎಂದರೆ ನಿಜ. 2022 ನೇ ಇಸ್ವಿಯಲ್ಲಿ ಆರೋಪಿತನು ಯಾವುದೇ ನಿವೇಶನಗಳ ಅಭಿವೃದ್ಧಿ ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಆತನು ಪ್ಲಾಟಗಳನ್ನು 2016 ನೇ ಇಸ್ವಿಯಲ್ಲಿಯೇ ಅಬಿವೃದ್ದಿಗೊಳಿಸಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದ್ರಿ ಸಂಗತಿಯ ಬಗ್ಗೆ ನಿಮಗೆ ಮಾಹಿತಿ ಇದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದಿರಿ ಎಂದರೆ ಸರಿಯಲ್ಲ. ನಿಮ್ಮ ಪ್ರಕರಣವನ್ನು ಸಾಬೀತುಪಡಿಸಲು ಆರೋಪಿತನು ಪ್ಲಾಟಿನ ಅಭಿವೃದ್ದಿಗಾಗಿ ನನ್ನಿಂದ ಹಣ ಪಡೆದುಕೊಂಡಿದ್ದಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದಿರಿ ಎಂದರೆ ಸರಿಯಲ್ಲ.  ನಾವು ಆರೋಪಿತನಿಗೆ ಕೊಟ್ಟ ಹಣಕ್ಕಾಗಿ ಪ್ರತಿಫಲವಾಗಿ ನಿವೇಶನವನ್ನು ಕೇಳಿದ್ದೆವು. ನಾವು ಆರೋಪಿತನ ಬಳಿ ಯಾವ ನಂಬರು ಮತ್ತು ಎಷ್ಟನೇ ನಿವೇಶನವನ್ನು ಕೇಳಿರುತ್ತೇವೆ ಎಂದು ನನಗೆ ಹೇಳಲಾಗುವುದಿಲ್ಲ. ನಾನು ಯಾವುದೇ ಬ್ಯಾಂಕಿನಲ್ಲಿ ಸಾಲವನ್ನು ಮಾಡಿರುವುದಿಲ್ಲ. ನೀವು ಯಾವುದೇ ಬ್ಯಾಂಕಿನಲ್ಲಿ ಸಾಲ ಪಡೆಯದೇ ನಿವೇಶನಕ್ಕಾಗಿ ಹಣ ಕೊಟ್ಟಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಆರೋಪಿತನಿಗೆ ನೋಟಿಸನ್ನು ಯಾವ ದಿನಾಂಕದಂದು ಕೊಟ್ಟಿರುತ್ತೇವೆ ಎಂದು ನನಗೆ ನೆನಪಿರುವುದಿಲ್ಲ. ನಿಪಿ 1 ರಲ್ಲಿ ಬರವಣಿಗೆಯನ್ನು ಯಾರು ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಿಪಿ 1 ರಲ್ಲಿ ಇರುವ ಬರವಣಿಗೆಗೂ ಮತ್ತು ಹಸ್ತಾಕ್ಷರಕ್ಕೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ನಿಪಿ 1 ರಲ್ಲಿ ಇರುವ ಬರವಣಿಗೆಯು ಡಿಮ್ ಆಗಿದ್ದು, ಹಸ್ತಾಕ್ಷರವು ದಪ್ಪಾಗಿರುತ್ತದೆ ಎಂದರೆ ನಿಜ. ನಿಪಿ 1 ರಲ್ಲಿನ ಬರವಣಿಗೆಯನ್ನು ನೀವೇ ಸೃಷ್ಟಿಸಿರುತ್ತಿರಿ ಎಂದರೆ ಸರಿಯಲ್ಲ. ನಾವು ಚೆಕ್ಕನ್ನು ನಗದೀಕರಣಕ್ಕಾಗಿ ದಿಃ 29-08-2022 ರಂದು ಸಲ್ಲಿಸಿರುತ್ತೇನೆ. ಬ್ಯಾಂಕಿನವರು ಮೆಮೊವನ್ನು 30 ನೇ ತಾರೀಕಿನಂದು ಕೊಟ್ಟಿರುತ್ತಾರೆ. ಆರೋಪಿತನ ವಿಳಾಸವು ಅಂಬೇಡ್ಕರ ಓಣಿ, ಮುಂಡಗೋಡ ಎಂದರೆ ನನಗೆ ಮಾಹಿತಿ ಇರುವುದಿಲ್ಲ. ಆತನು ಸದ್ರಿ ವಿಳಾಸದಲ್ಲಿಯೇ ಖಾಯಂ ಆಗಿ ವಾಸವಾಗಿರುತ್ತಾನೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಪಿ 1 ರಲ್ಲಿ ಇರುವ ಸಹಿಯ ಮತ್ತು ನಿಪಿ 4 ರಲ್ಲಿರುವ ಸಹಿಯು ವ್ಯತ್ಯಾಸವಿದೆ ಎಂದರೆ ನಿಜ. ನಿಪಿ 1 ರಲ್ಲಿರುವ ಸಹಿ, ಬೇಲ್ ಬಾಂಡ್ ನಲ್ಲಿರುವ ಸಹಿ ಹಾಗೂ ಆರೋಪಿತನ ವಕಾಲತನಲ್ಲಿ ಇರುವ ಸಹಿಗಳು ಒಂದೇಯಾಗಿರುತ್ತವೆ ಎಂದರೆ ನಿಜ.  ನಿಪಿ 4 ರಲ್ಲಿರುವ ಸಹಿ ಮಾತ್ರ ಬೇರೆ ಇರುತ್ತದೆ ಎಂದರೆ ನಿಜ. ಆರೋಪಿತನಿಗೆ ಯಾವತ್ತೂ ನೋಟಿಸು ಜಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಆತನು ನಿಮ್ಮ ಫಿರ್ಯಾದಿಯಲ್ಲಿ ನಮೂದಿಸಿದ ವಿಳಾಸದಲ್ಲಿ ವಾಸವಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ .ಹೇ.ಕೇ. ಸರಿ ಇದೆ

Sd/-

**ಪ್ರ.ದ.ನ್ಯಾ.ದಂ. ಮುಂಡಗೋಡ.**